ಅನುಬಂಧ-II

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನಸಭೆ
(ಆರನೇ ಅಧಿವೇಶನ)
(ಮುಂದುವರಿದ ಉಪವೇಶನಗಳು)

ಕರ್ನಾಟಕ ಧನ ವಿನಿಯೋಗ (ಸಂಖ್ಯೆ-4) ವಿಧೇಯಕ 1997

(1997ರ ವಿಧಾನಸಭಾ ವಿಧೇಯಕ ಸಂಖ್ಯೆ 32)

1987-88ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಅಧಿಕಾರ ನೀಡಲು ಒಂದು ವಿಧೇಯಕ.

1987-88ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ.

ಇದು ಭಾರತ ಗಣರಾಜ್ಯದ ನಲವತ್ತೆಂಟನೆಯ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ:

1. ಸಂಕ್ಷಿಪ್ತ ಹೆಸರು: ಈ ಅಧಿನಿಯಮವನ್ನು ಕರ್ನಾಟಕ ಧನ ವಿನಿಯೋಗ (ನಂ.4) ಅಧಿನಿಯಮ 1997 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯೊಳಗಿಂದ 1987-88ನೇ ಹಣಕಾಸು ವರ್ಷದಲ್ಲಿ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ತುಂಬುವುದಕ್ಕಾಗಿ 130,66,98,084 ರೂಪಾಯಿಗಳ ನೀಡಿಕೆ: ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 1987-88ನೇ ಹಣಕಾಸು ವರ್ಷದಲ್ಲಿ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ನೂರ ಮೂವತ್ತು ಕೋಟಿ ಅರವತ್ತಾರು ಲಕ್ಷ ತೊಂಬತ್ತೆಂಟು ಸಾವಿರದ ಎಂಬತ್ತನಾಲ್ಕು ರೂಪಾಯಿಗಳ ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ

ಸಂದಾಯವಾಗಿ ಉಪಯೋಗಿಸಲಾಗಿದೆ ಎಂದು ಭಾವಿಸತಕ್ಕುದು.

3. ಧನ ವಿನಿಯೋಗ: ಈ ಅಧಿನಿಯಮದ ಮೂಲಕ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು 1987-88ನೇ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸಿದೆ ಎಂದು ಭಾವಿಸತಕ್ಕುದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ) 1987-88

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		ಒಟ್ಟು
			ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	
1	2		3	4	5
1	ಭೂಸಾರ ಮತ್ತು ಜಲ ಸಂರಕ್ಷಣೆ ಮತ್ತು ಕೃಷಿ (ತೋಟಗಾರಿಕೆ ಹೊರತುಪಡಿಸಿ)	-ರಾಜಸ್ವ	4,67,35,332	-	4,67,35,332
10	ಉನ್ನತ ಶಿಕ್ಷಣ	-ರಾಜಸ್ವ	4,48,75,775	-	4,48,75,775
11	ಯುವಜನ ಸೇವೆಗಳು	-ಬಂಡವಾಳ	23,620	-	23,620
14	ಪ್ರೌಢ ಶಿಕ್ಷಣ	-ರಾಜಸ್ವ	15,43,09,380	-	15,43,09,380
-	ಆಂತರಿಕ ಋಣ, ಕೇಂದ್ರ ಸರ್ಕಾರದಿಂದ ಸಾಲ ಮತ್ತು ಅಂತರ ರಾಜ್ಯ ತೀರಿಕೆ	-ಬಂಡವಾಳ	-	41,65,51,004	41,65,51,004
17	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು	-ರಾಜಸ್ವ	53,51,989	-	53,51,989

1	2		3	4	5
22	ಅರಣ್ಯ	-ಬಂಡವಾಳ	56,22.629	-	56,22.629
31	ವಸತಿ (ಸರ್ಕಾರಿ ವಸತಿ ಗೃಹಗಳನ್ನು ಹೊರತುಪಡಿಸಿ)	-ರಾಜಸ್ವ	58,453	-	58,453
33	ನಗರಪಾಲಿಕೆಗಳು ಮತ್ತು ಪುರಸಭೆಗಳಿಗೆ ಅನುದಾನ ಮತ್ತು ಪರಿಹಾರ	-ರಾಜಸ್ವ	21,74,726	-	21,74,726
35	ನೀರಾವರಿ, ಜಲಸಂಚಾರಿ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು	-ಬಂಡವಾಳ	-	1,86,72,019	1,86,72,019
36	ರಾಜ್ಯದ ವಿಧಾನ ಮಂಡಲ	-ರಾಜಸ್ವ	-	69,957	69,957
44	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತುಪಡಿಸಿ)	-ರಾಜಸ್ವ	-	2,46,582	2,46,582
46	ರಸ್ತೆಗಳು ಮತ್ತು ಸೇತುವೆಗಳು	-ರಾಜಸ್ವ	3,30,53,053	-	3,30,53,053
49	ಭೂ ಕಂದಾಯ	-ರಾಜಸ್ವ	-	20,77,275	20,77,275
54	ವಕ್ಫ್	-ರಾಜಸ್ವ	34,000	-	34,000

1	2		3	4	5
56	ನಿಯಂತ್ರಿತ ಮಾರುಕಟ್ಟೆಗಳು	-ರಾಜಸ್ವ	6,08,499	-	6,08,499
58	ಸಮಯದಾಯ ಅಭಿವೃದ್ಧಿ	-ರಾಜಸ್ವ	206,80,011	-	2,06,80,011
		-ಬಂಡವಾಳ	54,000	-	54,000
60	ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳು	-ರಾಜಸ್ವ	164327367	-	164327367
61	ಕಾರ್ಮಿಕ ಮತ್ತು ಉದ್ಯೋಗ	-ರಾಜಸ್ವ	5694748	-	5694748
62	ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ	-ರಾಜಸ್ವ	385477665	-	385477665
		ಒಟ್ಟು ಜುಮ್ಲಾ	869081247	437616837	1306698084

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1987-88ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಲಾದ ಮೊಬಲಗಿಗಿಂತ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಭಾರತ ಸಂವಿಧಾನದ 205(1) (ಬ) ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ದರಾಮಯ್ಯ
ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು,
ಯೋಜನೆ ಮತ್ತು ಕಾರ್ಮಿಕ ಸಚಿವರು.

ಯಾಕೂಬ್ ಪರೀಫ್
ಕಾರ್ಯದರ್ಶಿ